

ಗೋಡೆಯ ಮೇಲಿನ ಹಳೆಯ ಗುರುತು ನೋಡಿದಾಗ, ಹತ್ತು ವರ್ಷಗಳ ಹಿಂದಿನ ನೆನಪುಗಳು ಮತ್ತೆ ಜೀವಂತವಾದವು. ಕಾಲದಿಂದ ಮಾಯವಾಗದ ಒಂದು ತಪ್ಪಿನ ಗುರುತು. ಈ ಕೋಣೆಯಲ್ಲೇ ಆಕೆ ಮತ್ತು ಮೂರ್ತಿ ನಡುವೆ ಭೀಕರ ಜಗಳವಾಗಿತ್ತು. ಕಾಫಿಯ ಗ್ಲಾಸ್ ಗೋಡೆಗೆ ಅಪ್ಪಳಿಸಿತ್ತು. ಒಟ್ಟಿಗೆ ರೆಸಾರ್ಟ್‌ಗೆ ಬಂದಿದ್ದವರು; ಬೇರೆಬೇರೆಯಾಗಿ ಹೋದರು.

'ನಾನು ವೈದ್ಯೆ. ಮನಸ್ಸಿನ ರೋಗಗಳನ್ನು ಗುರುತಿಸಲು ಕಲಿತವಳು, ನಾನು ಜನರ ಮನಸ್ಸುಗಳನ್ನು ಓದಿದ್ದೇನೆ, ಅವರ ನೋವಿಗೆ ಹೆಸರು ಕೊಟ್ಟಿದ್ದೇನೆ. ಆದರೆ, ನನ್ನ ನೋವಿಗೆ ಯಾವ ಹೆಸರು ಕೊಡಲಿ? ಈ ಕಾಡುವ ನೆನಪುಗಳನ್ನು ಹೇಗೆ ತೊಡೆದುಕೊಳ್ಳಲಿ?' ರೋಹಿಣಿ ಶವರ್ ಅಡಿ ನಿಂತು ನೀರಿಗೆ ತಲೆಯೊಡ್ಡಿದ್ದಳು.

'ರೂಬಿ' ಅಪ್ಪ-ಅಮ್ಮ ಇಟ್ಟ ನಿಕ್ ನೇಮ್. ಅವಳ ಮೂಲ ಹೆಸರು ಚಿತ್ರಾ. ಗಗನಸಖಿಯಾಗಿ ವಿದೇಶದಲ್ಲಿ ನೆಲೆಸಿದ್ದಳು. ಆಕೆಯ ಗಂಡ ವರುಣ್ ಕಾರ್ಪೊರೇಟ್ ಜಗತ್ತಿನಲ್ಲಿ ಪ್ರಮುಖ ಹುದ್ದೆ ಹೊಂದಿದ್ದ. ಇನ್ನೂ ರೂಬಿ ಮತ್ತು ಆಕೆಯ ಗಂಡ ಚೆಕ್‌ಇನ್ ಆಗಿರಲಿಲ್ಲ. ರೋಹಿಣಿ ಒಬ್ಬಳೇ ಡೈನಿಂಗ್ ಹಾಲ್‌ನಲ್ಲಿ ಕುಳಿತಿರುವಾಗ, 'ರೋಹಿಣಿ...' ಎಂಬ ಧ್ವನಿ ಕೇಳಿತು. ತಿರುಗಿ ನೋಡಿದಾಗ ಮೂರ್ತಿ ನಿಂತಿದ್ದನು- ಆಕೆಯ ಮಾಜಿ ಪತಿ!